ಸಾಂತ್ವನ ಮಾಡುವ ನೆವದಲ್ಲಿ ಗುಸುಗುಸು ಅನ್ನುವವರೇ. ''ಹೆಂಡ್ತಿ ಮನೆ ಹೊರಗೆ ಹಾಕಿರದಿದ್ದರ ಹಾದಿ ಹೆಣ ಆಗುತ್ತಿರಲಿಲ್ಲ ಪಾಪ!'' ಅಂತ ಮರುಕ ವ್ಯಕ್ತ ಪಡಿಸುತ್ತಿದ್ದರು. ಆದರೆ, ಸುನಂದಬಾಯಿ, ''ಸಾಧ್ಯನೇ ಇಲ್ಲ... ಮೊನ್ನೆ ತಿರುಪತಿಗೆ ಹೊಂಟೇನಿ ಅಂತ ಫೋನ್ ಮಾಡಿದ್ರು. ಬರುವಾಗ ಪ್ರಸಾದ ತೊಗೊಂಡು ಬರ್ರಿ ಅಂತ ಹೇಳಿದ್ದೆ. ಹಂಗಿದ್ರ ಅವರ ಜೊತೆಗೆ ವೆಂಕಪ್ಪಂದು ಪ್ರಸಾದ ಇರಬೇಕಲ್ಲ'' ಅಂತ ವಕೀಲಿ ಪಾಯಿಂಟ್ ತೆಗೆದಳು.

ಅದ್ಯಾವುದೂ ಸತ್ಯ ಅಲ್ಲ ಅಂತ ರಮೇಶನಿಗೆ ಗೊತ್ತಿತ್ತು. ಆದರೆ, ನೆರೆದ ಜನರೆದುರು ಅಸಹ್ಯ ಆಗಬಾರದು ಅಂತ, ''ಏನೇ ಆಗಲಿ, ಹೋಗಿ ಬರೋಣ... ಒಂದು ಸಲ ನೋಡಿ ಬರೊ ಮಾತೇ ಬೇರೆ'' ಎಂದ. ಮಕ್ಕಳು ಅಮ್ಮ ನಾವು ಬರ್ತೀವಿ ಅಂದಾಗ ಸುನಂದಾ, ''ಯಾರ್ ಹೆಣಾನೂ ಏನೋ. ನೀವ್ಯಾಕ ನೋಡತ್ತೀರಿ. ನಾ ಎಲ್ಲಾ ನೋಡಿ ಬರ್ತೀನಿ'' ಎಂದಳು. ಅವಳ ದನಿಯಲ್ಲಿ ಇದೆಲ್ಲವನ್ನು ಸುಳ್ಳು ಮಾಡುತ್ತೇನೆ ಎಂಬ ವಿಶ್ವಾಸ ಇತ್ತು.

★★★

ಸುನಂದಾ ನೆಮ್ಮದಿಯ ಮುಖ ನೋಡಿ ನೆರೆದ ಜನ ಅಲವತ್ತುಕೊಂಡರು. ಗುಸುಗುಸು ನಿಂತಿರಲಿಲ್ಲ. ''ಪ್ರಾಣೇಶ ಅಲ್ಲಂತ...'' ಎಂದು ಅನುಮಾನಾಸ್ಪದವಾಗಿ ಒಪ್ಪಿಕೊಂಡು ಅಲ್ಲಿಂದ ನಡೆದರು. ಬಂದವರಿಗೆಲ್ಲ ರಮೇಶ ಹೇಳುತ್ತಿದ್ದ, ''ಪ್ರಾಣೇಶಣ್ಣಗ ತೊಡೆ ಸಂದಿಗೆ ಒಂದು ದೊಡ್ಡ ಮಚ್ಚೆ ಇತ್ತಂತೆ. ಸುನಂದಾಬಾಯಿ ಅದನ್ನು ಆ ಹೆಣದ ಮ್ಯಾಲ ಹುಡುಕಿದಳು. ಎಲ್ಲೂ ಸಿಗಲಿಲ್ಲ. ಪೊಲೀಸರಿಗೂ ಅದನ್ನೇ ಕೇಳಿದಳು. ಆ ಮಚ್ಚೆ ಅದಯೇನು ಅಂತ, ಅವರೂ... ಇಲ್ಲ ಅಂದರು. ಜೊತೆಗೆ ಯಾವ ಚೀಲಾನೂ ಇರಲಿಲ್ಲ, ತಿರುಪತಿ ಪ್ರಸಾದನೂ ಇರಲಿಲ್ಲ. ಮುಖ್ಯ ಅಂದ್ರ ಜನಿವಾರನೇ ಇರಲಿಲ್ಲ'' ಎಂದು ಅನಿವಾರ್ಯದ ನಗು ನಕ್ಕ. ನೆರೆದ ಜನಾನೂ ಸುಳ್ಳನ್ನು ಅರಗಿಸಿಕೊಳ್ಳಲಾರದೆ ಆತ ಹೇಳಿದ ಸತ್ಯವನ್ನು ನಂಬಿದಂತೆ ನಟಿಸಿದರು. ''ಮುಂಜಾನಿಂದ ಹೈರಾಣಾಗ್ಯದ. ಬೇಕಾರ್ ಕೆಲಸಾ. ಬಂದದ್ದಲ್ಲ, ಬಾರಿಸಿದ್ದಲ್ಲ'' ಎಂದು ದೊಡ್ಡದಾಗಿ ಆಕಳಿಸಿದಾ... ನೀವಿನ್ನ ಹೋಗರಿ ಅನ್ನವಂತೆ.

ಸುನಂದಾಬಾಯಿ ತಲೆಸ್ನಾನ ಮಾಡಿ, ''ಒಂದೇ ಸಮ ತಲಿ ನೊಯ್ಲಿಕತ್ತದ. ಖಡಕ್ ಚಹಾ ಮಾಡವ ರಶ್ಮಿ...'' ಎಂದು ದೊಡ್ಡ ಮಗಳಿಗೆ ಹೇಳಿದಳು. ಕನ್ನಡಿ ಮುಂದೆ ನಿಂತು ಹಣೆಗೆ ಕುಂಕುಮ ತೀಡುವಾಗ ಪೊಲೀಸ್ ಸ್ಟೇಶನ್ನಲ್ಲಿದ್ದ ದೇಹದ ತೊಡೆ ಸಂದಿಯಲ್ಲಿಯ ಕಾಣದ ಮಚ್ಚೆ ಕನ್ನಡಿಯಲ್ಲಿ ನಕ್ಕಂತಾಯಿತು. ಅದನ್ನು ಕಂಡ ಕ್ಷಣ ಅಂತಹ ಗಟ್ಟಿಗಿತ್ತಿಯಾದ ಸುನಂದಾಬಾಯಿಯ ಜೀವವೇ ಬಾಯಿಗೆ ಬಂದಿತ್ತು.

**ಸಂಧ್ಯಾ ಹೊನಗುಂಟಿಕರ್**

ಬಾಲ್ಯ ಕಳೆದಿದ್ದು ಮತ್ತು ವಿದ್ಯಾಭ್ಯಾಸ ಮಾಡಿದ್ದು ಯಾದಗಿರಿಯಲ್ಲಿ. ಎಂ.ಎ. ಪದವೀಧರೆ. ಸಣ್ಣಕತೆ, ಮಕ್ಕಳ ಕತೆಗಳ ಸಂಕಲನ, ಪ್ರಬಂಧ ಸಂಕಲನ ಮತ್ತು ಸಂಪಾದಿತ ಕೃತಿಗಳು ಸೇರಿದಂತೆ ಎಂಟು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಸಮಾಜ ಸೇವೆ, ಅಭಿನಯ ಆಸಕ್ತಿಯ ಕ್ಷೇತ್ರಗಳು. ಅವರ ನಾಟಕಗಳು ಕಲಬುರ್ಗಿ ಆಕಾಶವಾಣಿಯಿಂದ ಪ್ರಸಾರಗೊಂಡು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಬಹುಮಾನ ಪಡೆದಿವೆ. 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. ಪ್ರಸ್ತುತ ಕಲಬುರ್ಗಿಯಲ್ಲಿ ನೆಲೆಸಿದ್ದಾರೆ.